ಸೌಲಭ್ಯಗಳ ಜೊತೆಗೆ ಕಳುಹಿಸಲಿಕ್ಕೆ ಸಾಧ್ಯವಿದೆಯೇ?

ಶ್ರೀ ಸಿ.ಗುರುನಾಥ್:- ಈಗಾಗಲೇ ಬೀಡಿ ಉದ್ಯೋಗದಲ್ಲಿರತಕ್ಕಂಥ ಕೆಲಸಗಾರರಾಗಲೀ ಕಾರ್ಖಾನೆಗಾಗಲೀ ನಾವು ಅವರಿಗೆ ಲೈಸೆನ್ಸ್ ಕೊಡುತ್ತಾ ಇಲ್ಲ. ಕೇಂದ್ರ ಸರ್ಕಾರ ಕೊಡುತ್ತಾ ಇದೆ. ಈಗ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಈ 5 ಸೆಂಟಿಮೀಟರ್ ಸಿಗರೇಟ್ ಏನಿದೆ ಇದರ ಸಲುವಾಗಿ ನಾನೂ ಸಹ 31, 32ನೇ ಕಾರ್ಮಿಕ ಸಮ್ಮೇಳನದಲ್ಲೂ ಸಹ ಕೇಂದ್ರ ಕಾರ್ಮಿಕ ಮಂತ್ರಿಯವರಿಗೆ ಒತ್ತಾಯ ಮಾಡಿದ್ದೇವೆ, ಇದು ರದ್ದುಪಡಿಸಬೇಕು, ಲೈಸೆನ್ಸ್ ಕೊಡಬಾರದು; ಅದರಿಂದ ನಮಗೂ ಅನಾಹುತ ಆಗುತ್ತಾ ಇದೆ, ಇದರಲ್ಲಿ ಕಾಂಪೋಸಿಷನ್ ವ್ಯತ್ಯಾಸ ಬಹಳ ಕಡಿಮೆ ಇದೆ ಸಣ್ಣ ಬೀಡಿಗೂ ಸಿಗರೇಟಿಗೂ ಎಂದು ನಾವು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದೇವೆ. ಇದಲ್ಲದೆ ಅವರು ಬೇರೆ ಕೆಲವು ವಿಷಯ ಹೇಳಿರುತ್ತಾರೆ. ಲೇಬರ್ ಕೋರ್ಟ್ ಬಗ್ಗೆ. ಲೇಬರ್ ಕೋರ್ಟ್‌ನಲ್ಲಿರತಕ್ಕ ಹಲವಾರು ನ್ಯಾಯಾಧೀಶರ ಹುದ್ದೆಗಳನ್ನು ಎಲ್ಲಾ ಸ್ಥಳದಲ್ಲಿ ಸಾಕಷ್ಟು ನಾವು ಭರ್ತಿ ಮಾಡಿದ್ದೇವೆ. ಸಾಕಷ್ಟು ಕೇಸೂ ಸಹ ಬಗೆಹರಿಸಿದ್ದೇವೆ. ಹಿಂದಿನ ವರ್ಷದಲ್ಲಿ 17 ಸಾವಿರಕ್ಕಿಂತ ಹೆಚ್ಚು ಕೇಸ್‌ಗಳಿತ್ತು. ಈಗಾಗಲೇ 3 ಸಾವಿರಕ್ಕಿಂತ ಹೆಚ್ಚು ಕೇಸುಗಳಲ್ಲಿ ಪರಿಹಾರ ಕಂಡು ಹಿಡಿದು ನ್ಯಾಯ ದೊರಕಿಸಿಕೊಟ್ಟಿದ್ದೇವೆ ಅಂತ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು:- ಪ್ರಶ್ನೋತ್ತರ ಮುಗಿಯಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಸಭಾಧ್ಯಕ್ಷರೆ.....

ಅಧ್ಯಕ್ಷರು:- ಒಂದು ನಿಮಿಷ ಇರಿ. ಕ್ವೆಶ್ಚನ್ಸ್‌ಗೆ ಸಂಬಂಧಪಟ್ಟಂತೆ ಸ್ವಲ್ಪ ಹೇಳಬೇಕಾಗಿದೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಒಂದು ಸೂಚನೆ. ಅನೇಕ ಜನ ಮಾನ್ಯ ಸದಸ್ಯರುಗಳು ಕಳುಹಿಸಿರತಕ್ಕಂಥ ಸ್ಟಾರ್ಡ್ ಮತ್ತು ಅನ್‌ಸ್ಟಾರ್ಡ್ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿಕೊಡುವುದಕ್ಕೆ ಸರ್ಕಾರದ ವತಿಯಿಂದ ಕೆಲವು ಸಮಯ ಕೇಳಿದ್ದಾರೆ. ಸಮಯ ಕಡಿಮೆ ಇದ್ದು ಸಮಯ ಕೇಳತಕ್ಕದ್ದು, ವಿವರವಾದ ಮಾಹಿತಿಯನ್ನು ಲಭ್ಯ ಮಾಡಿಕೊಂಡು ಉತ್ತರ ಕಳುಹಿಸುವುದಕ್ಕೆ ಸಮಯದ ಅಗತ್ಯ ಇರುತ್ತದೆ. ನಾನು ಎಲ್ಲಾ ಕೇಸ್‌ಗಳಲ್ಲೂ ಆಗಬಹುದು ಅಂತ ಹೇಳುವುದಿಲ್ಲ. ಕೆಲವು ಅತಿ ಸೂಕ್ಷ್ಮವಾಗಿರತಕ್ಕ ಪ್ರಶ್ನೆಗಳ ವಿಚಾರದಲ್ಲಿ ಯಾವುದೋ ಒಂದು ಹಂತದಲ್ಲಿರತಕ್ಕ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಸರ್ಕಾರಕ್ಕೆ ಮಾಹಿತಿಯನ್ನು ಕೊಡುವುದು ನಿಧಾನ ಮಾಡುತ್ತಾರೆ ಎನ್ನತಕ್ಕಂಥ ಅಭಿಪ್ರಾಯ ಕೆಲವು ಸದಸ್ಯರುಗಳಿಗೆ ಬಂದು ಅವರು ನನ್ನನ್ನು ಬಂದು ಖಾಸಗಿಯಾಗಿ ಭೇಟಿಯಾಗಿದ್ದಾರೆ. ಆ ರೀತಿಯ ಅಭಿಪ್ರಾಯಗಳಿಗೆ ಅವಕಾಶ ಇರಲಾರದಂತೆ ಎಲ್ಲಾ ಮಾನ್ಯ ಸಚಿವರುಗಳಿಗೆ ದಯಮಾಡಿ ಸೂಚನೆ ಕೊಟ್ಟು ಯಾರು ಯಾರು ಪ್ರಶ್ನೆಗಳಿಗೆ ಉತ್ತರ ಕಳುಹಿಸಿಕೊಡುವುದಕ್ಕೆ ಸಮಯಾವಕಾಶವನ್ನು ಕೇಳಿದ್ದಾರೆ, ಮೂರು ವಾರಗಳ ಒಳಗಾಗಿ ಎಲ್ಲಾ ಸದಸ್ಯರಿಗೆ ಉತ್ತರ ತಲುಪುವುದಕ್ಕೆ ಅದು ಲಿಖಿತ ಮೂಲಕ ಇರತಕ್ಕಂಥ ಪ್ರಶ್ನೆಯಾಗಲೀ ಅಥವಾ ಸ್ಟಾರ್ಡ್ ಪ್ರಶ್ನೆ ಇರಲಿ ಎಲ್ಲದಕ್ಕೂ ಕೂಡ ಉತ್ತರ ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೂ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು:- ಅದನ್ನೇ ನಿಮ್ಮ ಪರವಾಗಿ ನಾನು ಹೇಳಿದ್ದುದು. ನಿಮ್ಮ ಡ್ಯೂಟಿ ಎಲ್ಲಾ ನಾನೇ ಮಾಡುತ್ತಾ ಇದ್ದೇನೆ.

ಶ್ರೀ ಎ.ರಾಮದಾಸ್:- ಅಧ್ಯಕ್ಷರೆ, ತಮಗೆ ಅಭಿನಂದನೆಗಳು. ಏಕೆಂದರೆ ತಾವು ನಮ್ಮ ರಕ್ಷಣೆಗೆ ಬಂದಿದ್ದೀರಿ.

ಅಧ್ಯಕ್ಷರು:- ನಿಮಗೆ ನಾನೇ ರಕ್ಷಣೆ. ಇನ್ನಾರಿದ್ದಾರೆ ರಕ್ಷಣೆ?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸನ್ಮಾನ್ಯ ಸಭಾಧ್ಯಕ್ಷರೆ.....

ಅಧ್ಯಕ್ಷರು:- ಈಗ ಶಾಸನ ರಚನೆ ತೆಗೆದುಕೊಳ್ಳೋಣ. ಬಿಲ್ ಇಂಟ್ರೊಡ್ಯೂಸ್ ಮಾಡಿದ ಮೇಲಲ್ಲವೇ ತಾವು ಮಾತನಾಡುವುದು? ಈಗಲೇ ನಿಂತುಬಿಟ್ಟಿದ್ದೀರಿ ಮೇಡಂ.

ಶ್ರೀ ಮತಿ ಪ್ರಮೀಳಾ ನೇಸರ್ಗಿ:- ಸನ್ಮಾನ್ಯ ಸಭಾಧ್ಯಕ್ಷರೆ.....

ಅಧ್ಯಕ್ಷರು:- ವಿಷಯ ಏನು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಹೇಳುತ್ತೇನೆ. ಇವತ್ತು ಲಕ್ಷಾಂತರ ಜನ ಬೆಂಗಳೂರಿನ ಕಬ್ಬನ್ ಪಾರ್ಕಿಗೆ ಬಂದು ಸೇರಿದ್ದಾರೆ.

ಅಧ್ಯಕ್ಷರು:- ಬರಲಿ. ಸಂತೋಷ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಬೆಂಗಳೂರಿಗೆ ಬಂದವರಿಗೆ ಕುಡಿಯುವ ನೀರಿಲ್ಲ. ವಿದ್ಯುಚ್ಛಕ್ತಿ ಅಭಾವ.....

ಅಧ್ಯಕ್ಷರು:- ವಿಷಯ ಏನು ಎಂದು ನನಗೆ ಹೇಳಬೇಕು. Please listen to me. You are a learned Member of this House. There is no zero hour today. I have closed the question hour. I am moving on to the next item. (Interruptions) I want to know what is that you want to say.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಅಧ್ಯಕ್ಷರೆ, Necessity knows no law. ತಮಗೆ ಗೊತ್ತಿದೆ. ಪ್ರೊಸೀಜರ್ ಎಲ್ಲಾ ನಾವು ಮಾಡಿಕೊಂಡಿರತಕ್ಕದ್ದು. ಜೀರೋ ಹವರ್ ಇಲ್ಲ ಎಂದರೂ ಕೂಡ ಅಲ್ಲಿ ಸಂದರ್ಭಾನುಸಾರವಾಗಿ ಜೀರೋ ಹವರನ್ನು.....

MR. SPEAKER:- There is a word of difference. 'Necessity' and 'convenience'. I want to know exactly whether it is borne out of convenience or out of necessity. This House is willing to respond to the necessities of the Society. But convenience can not always be complied with. Please tell me. I should know what it is. Whether it is necessity or convenience.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಏನು ಎಂಬುದನ್ನು ಹೇಳುತ್ತೇನೆ. ಇವತ್ತು ಏನಾಯಿತು ಎಂದರೆ ಸದನದಲ್ಲಿ ನಾವು ತೀರ್ಮಾನ ತೆಗೆದುಕೊಂಡೆವು. ಬಸವೇಶ್ವರರ ಹೆಸರಿಟ್ಟು.....

MR.SPEAKER:-No please. I am not reopening the subject. Kindly listen to me. I am appealing to you.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಅಧ್ಯಕ್ಷರೆ, ಎರಡೇ ನಿಮಿಷದಲ್ಲಿ ಹೇಳುತ್ತೇನೆ. ಜಾಸ್ತಿ ತೆಗೆದುಕೊಳ್ಳುವುದಿಲ್ಲ. ಎರಡು ನಿಮಿಷದ ಮೇಲೆ ಒಂದು ಚೂರೂ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು:- ತಾವು ಕುಳಿತುಕೊಳ್ಳಿ. ಒಂದು ನಿಮಿಷ This matter was raised by the Hon. Leader of the Oppositiion the other day. Hon'ble Deputy Chief Minister has made some statement. This matter had not been included in the agenda on that day. But the Leader of the Opposition did seek my permission before raising the issue. The right person to answer this question, would be the Hon'ble Chief Minister. He has availed my permission not to be present till afternoon. He is coming back. Therefore there is no point in raising that matter. When he is present in the House ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದರೆ ಅವರಿದ್ದು ಅದಕ್ಕೆ ಉತ್ತರ ಕೊಡುತ್ತಾರೆ. ಆದ್ದರಿಂದ ನಾವು ಈಗ ಸಮಯವನ್ನು ವ್ಯರ್ಥ ಮಾಡುವುದು ಬೇಡ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ವಕೀಲರಾಗಿರತಕ್ಕವರು, ಶಾಸನ ರಚನೆ ನಮ್ಮ ಮುಖ್ಯವಾದ ಕೆಲಸ. ನಾವು ಅಜೆಂಡಾದಲ್ಲಿ ಸೇರಿಸಿದ್ದೇವೆ. ಆ ಕೆಲಸಕ್ಕೆ ಮುಂದುವರೆಯೋಣ. ಮುಖ್ಯ ಮಂತ್ರಿಗಳು ಮಧ್ಯಾಹ್ನ ಬಂದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿ.

(ಶ್ರೀಮತಿ ಪ್ರಮೀಳಾ ನೇಸರ್ಗಿ, ಶ್ರೀ ಸದಾನಂದಗೌಡ ಮತ್ತು ಇನ್ನೂ ಹಲವಾರು ಸದಸ್ಯರು ಎದ್ದುನಿಂತು ಮಾತನಾಡುತ್ತಿದ್ದರು. ಯಾವುದೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ)

ಅಧ್ಯಕ್ಷರು:- ತಾವು ಪ್ರಸ್ತಾಪ ಮಾಡಬೇಕಾಗಿತ್ತು. ಮಾಡಿದ್ದು ಆಯಿತು.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ:- ಬಾಳೆಹೊನ್ನೂರಿನಲ್ಲಿ ಈ ಸಭೆಯಲ್ಲಿ ತೀರ್ಮಾನ ಆದ ಮೇಲೆ ಮುಖ್ಯ ಮಂತ್ರಿಗಳು ಭಾಷಣ ಮಾಡಿದರು. ಏನು ಹೇಳಿದರು ಮುಖ್ಯಮಂತ್ರಿಗಳು? ಹಿಂದಿನ ಮುಖ್ಯ ಮಂತ್ರಿಗಳು ಯಾರೂ ಇರಲಿಲ್ಲ, ನಾನು ಇಟ್ಟಿದ್ದೇನೆ ಎಂದು ಹೇಳಿದರು. ಡೆಪ್ಯುಟಿ ಮುಖ್ಯ ಮಂತ್ರಿಗಳು ಜೆ.ಎಚ್.ಪಟೇಲರು ಲಿಂಗಾಯಿತ ಮಂತ್ರಿಗಳು ಇಲ್ಲಿ ಹೇಳಿದರು. ಅದನ್ನು ಇಲ್ಲಿ ಒಪ್ಪಿಕೊಂಡರು. ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ನಾವಿಬ್ಬರೂ ಒಪ್ಪಿಗೆ ಕೊಟ್ಟಿಲ್ಲ ಅಂತ ಬಂದಿದೆ. ಇದು ಭಾರಿ ದುಃಖ ತರತಕ್ಕ ವಿಷಯ. ಲಿಂಗಾಯಿತ ಮಂತ್ರಿ ಅಂತ ಹೇಳಿ, ಲಿಂಗಾಯಿತ ಮಂತ್ರಿ ಏನೂ ಮಾಡಲೇ ಇಲ್ಲ, ನಾನೇ ಮಾಡಿದ್ದುದು ಬಸವೇಶ್ವರನ ಹೆಸರಿಟ್ಟಿದ್ದು ಅಂತ ಬಾಳೇಹೊನ್ನೂರಿನಲ್ಲಿ ಹೋಗಿ ಹೇಳಿದರು. ಈಗ ಮತ್ತೆ ಅದನ್ನು ಇಟ್ಟಿಲ್ಲ.

ಅಧ್ಯಕ್ಷರು:- ನೀವು ಹೇಳಿದ್ದೆಲ್ಲಾ ಅವರು ಕೇಳಿಸಿಕೊಂಡಿದ್ದಾರೆ. ನನ್ನ ಮಾತು ದಯವಿಟ್ಟು ಕೇಳಿ.

(ಹಲವಾರು ಸದಸ್ಯರು ಒಟ್ಟಿಗೆ ಮಾತನಾಡತೊಡಗಿದರು. ಗೊಂದಲದ ವಾತಾವರಣ)

ಅಧ್ಯಕ್ಷರು:- ದಯಮಾಡಿ ಕುಳಿತುಕೊಳ್ಳಿ. ನಾನು ಹೇಳುವುದನ್ನು ಕೇಳಿ.

(ಗೊಂದಲ)

ಅಧ್ಯಕ್ಷರು:- ನಾನು ನಿಂತಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ನಾನು ಶ್ರೀಮತಿ ಪ್ರಮೀಳ ಅವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ನನಗೆ ಕೆಲವು ಸಣ್ಣಕ್ಷರ ಕಾಣುವುದಿಲ್ಲ, ಅದಕ್ಕೆ ಕನ್ನಡಕ ಉಪಯೋಗಿಸುತ್ತೇನೆ. ಬೇರೆ ಎಲ್ಲಾ ಇಲ್ಲಿ ಕಾಣಿಸುತ್ತಾರೆ. ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾದವರು ಅಲ್ಲಿಲ್ಲ. ನನಗೇನಾದರೂ ಕಾಣದೇ ಇದ್ದರೆ ನಿಮಗೇನಾದರೂ ಅಲ್ಲಿ ಕಾಣುತ್ತಾ ಇದ್ದರೋ? ದಯಮಾಡಿ ಹೇಳಿ. ನೀವು ಪ್ರಸ್ತಾಪ ಮಾಡಬೇಕಾಗಿತ್ತು. ಪ್ರಜಾತಂತ್ರ ವ್ಯವಸ್ಥೆಯೊಳಗೆ ನಮಗೆ ಇದೆಲ್ಲಾ ಗೊತ್ತಾಗುತ್ತದೆ. ನೀವು ಮಾಡಿದ್ದಾಯಿತು, ಅದು ಯಾರಿಗೆ ಗೊತ್ತಾಗಬೇಕೋ ಗೊತ್ತಾಗಿದ್ದಾಯಿತು, ನಾಳೆ ಅದಕ್ಕೆ ಬೇಕಾದ ವ್ಯವಸ್ಥೆಯೆಲ್ಲಾ ಆಗುತ್ತೆ. ಮತ್ತೆ ಅದನ್ನು ಹಿಡಿದುಕೊಂಡು ಏತಕ್ಕೆ? ಅವರು ಬಂದಾಗ ಅದನ್ನು ಪ್ರಸ್ತಾಪ ಮಾಡೋಣ.

(ಗೊಂದಲ)

ಅಧ್ಯಕ್ಷರು:- ನೀವು ಅಲ್ಲಿಗೆ ಹೋಗಿ, ವೀರಾವೇಶದಿಂದ, ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮುಖ್ಯ ಮಂತ್ರಿಗಳು ಇಲ್ಲದೇ ಇದ್ದುದರಿಂದ ಸಭಾಧ್ಯಕ್ಷರು ಅವರನ್ನು ಕರೆಸಿದ ಮೇಲೆ ಅದನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿದ್ದಾರೆ ಎಂದು ಲಕ್ಷಾಂತರ ಜನರಿಗೆ ಹೇಳಿ. ಆ ವಿಚಾರವನ್ನು ಸೂಕ್ತ ಸಂದರ್ಭದಲ್ಲಿ ತೆಗೆದುಕೊಳ್ಳೋಣ. ಈಗ ಶಾಸನ ರಚನೆಗೆ ಹೋಗೋಣ.

ಶ್ರೀ ಬಿ.ಬಿ.ಶಿವಪ್ಪ:- ಪ್ರಸ್ತಾಪ ಅಲ್ಲ ಮಾನ್ಯ ಅಧ್ಯಕ್ಷರೆ. ಇಲ್ಲಿ ತಾವು ಅಪ್ಪಣೆ ಕೊಡಿಸುತ್ತಾ ಇದ್ದಿರಿ, ಇಲ್ಲಿ ತೀರ್ಮಾನ ಆಗಲಿಲ್ಲ. ವಿರೋಧಪಕ್ಷದ ನಾಯಕರು ಏನೋ ಪ್ರಸ್ತಾಪ ಮಾಡಿದರು. ಅದಕ್ಕೆ ಅವರೇನೋ ಉತ್ತರ ಕೊಟ್ಟರು. ಅಷ್ಟಕ್ಕೇ ಸೀಮಿತ ಆಗಿತ್ತು. ಅಜೆಂಡಾದಲ್ಲಿ ಇದೆಲ್ಲಾ ಇರಲಿಲ್ಲ. ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಇದಾದ ನಂತರ ಬಾಳೆಹೊನ್ನೂರಿನಲ್ಲಿ ಹೋಗಿ ಭಾಷಣ ಮಾಡಿ ಒಂದು ಕಮ್ಯುನಿಟಿ ಹೆಸರನ್ನು ಎತ್ತಿ, ಅವರಿದ್ದ ಕಾಲದಲ್ಲಿ ಮಾಡಲಿಕ್ಕಾಗಲಿಲ್ಲ, ನಾನು ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಆಡಿ, ನಿನ್ನೆ ಪತ್ರಿಕೆಯಲ್ಲಿ ಈ ಬಗ್ಗೆ ತೀರ್ಮಾನವೇ ಆಗಲಿಲ್ಲ ಎಂದು ಇನ್ನೊಂದು ಕಡೆ ಹೇಳುವುದಾದರೆ ಇದಕ್ಕೆ ಏನು ಹೇಳಬೇಕು. ಬೇರೆ ಯಾರೋ ಹೇಳಿದ್ದರೆ ನಾವು ಪ್ರಸ್ತಾಪ ಮಾಡುತ್ತಿರಲಿಲ್ಲ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಒಂದು ಜಾಗದಲ್ಲಿ ಒಂದು ಮಾತು ಮತ್ತೊಂದು ಜಾಗದಲ್ಲಿ ಮತ್ತೊಂದು ಮಾತು ಆಡುವುದಾದರೆ.....

ಅಧ್ಯಕ್ಷರು:- ನಮ್ಮಲ್ಲಿ ಅನೇಕ ರೂಲಿಂಗ್ಸ್ ಇದ್ದಾವೆ. ನ್ಯೂಸ್ ಪೇಪರುಗಳನ್ನು ನಾವು ಉಪಯೋಗ ಮಾಡಿಕೊಳ್ಳಬಹುದು. ಅವುಗಳಲ್ಲಿ ತಿಳುವಳಿಕೆ ವಿಚಾರ ಏನಾದರೂ ಇದ್ದರೆ, ಅವುಗಳನ್ನು ನಾವು ಬಳಸಿಕೊಳ್ಳಬಹುದು. ಕೆಲವು ಗಂಭೀರವಾದಂಥ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಬೇಕಾಗಿದ್ದರೆ, ನ್ಯೂಸ್ ಪೇಪರಿನಲ್ಲಿ ಬಂದಿರತಕ್ಕ ವರದಿಗಳನ್ನು ಆಧಾರಪಡತಕ್ಕಂತಾದ್ದು ಯೋಗ್ಯವಲ್ಲ ಉಚಿತವಲ್ಲವೆಂದು ಅನೇಕ ತೀರ್ಪುಗಳನ್ನು ಈ ಸದನದಲ್ಲಿ ಕೊಟ್ಟಿದೆ. ಇದು ತಮಗೂ ಗೊತ್ತಿದೆ. ನಿಮಗೆ ಗೊತ್ತಿಲ್ಲದೇ ಇರುವುದು ಏನೂ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಎಲ್ಲಾ ಕಡೆ ನಡೆದುದನ್ನು ಟೇಪ್ ರೆಕಾರ್ಡ್ ಮಾಡಿ

ಕೊಡುವುದಕ್ಕಾಗುತ್ತದೆಯೇ ಎಲ್ಲೆಲ್ಲಿ ಏನೇನು ಭಾಷಣ ಮಾಡುತ್ತಾರೆ, ಯಾವ ಸಭೆಯಲ್ಲಿ ಏನು ಮಾತನಾಡುತ್ತಾರೆಂದು ಕೊಡಬೇಕಾಗುತ್ತದೆ. ಈ ನ್ಯೂಸ್ ಪೇಪರ್ ಇಲ್ಲದೇ ಇದ್ದರೆ, ನಾವು ಇಲ್ಲಿ ಇರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಅಧ್ಯಕ್ಷರು:- ಮಾನ್ಯ ನಾಗೇಗೌಡರಿಗೆ ಎರಡು ನಿಮಿಷ ಅವಕಾಶ ಬೇಕಂತೆ, ಅವರು ಇವತ್ತು ಹುಶಾರ್ ಆಗಿ ಬರೆದು ಕಳುಹಿಸಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ನಮ್ಮ ಭಾರತ ದೇಶದ, ಅತ್ಯಂತ ಗೌರವವನ್ನು ಹೆಚ್ಚಿಸಿದಂಥ ನಮ್ಮ ಕ್ರಿಕೆಟ್ ಆಟಗಾರರಿಗೆ.....

ಅಧ್ಯಕ್ಷರು:- ಅದಕ್ಕೆಲ್ಲಾ ಅವಕಾಶ ಇಲ್ಲ. ದಯಮಾಡಿ ಇಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ತಾವು ಅವಕಾಶ ಕೊಟ್ಟಾಗ ನಾನು ಒಂದು ಮಾತನ್ನು ಹೇಳಬೇಕು.

(ಗೊಂದಲ)

ಅಧ್ಯಕ್ಷರು:- ನಾಗೇಗೌಡರೇ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನಮಗೆಲ್ಲರಿಗೂ ಅವಮಾನ ಮಾಡಿದ್ದೀರಿ.....

(ಗೊಂದಲ)

ಅಧ್ಯಕ್ಷರು:- ನಾನು ಯಾವಾಗಲೂ ಏಳದೇ ಇರುವವನು. ಇವತ್ತು ಎರಡು ಸಲ ಎಬ್ಬಿಸಿದ್ದೀರಿ. ಏಕೆ ಕಡೆ ದಿವಸ ಎಂದೇ. ನಾಗೇಗೌಡರೇ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ನಾಗೇಗೌಡರು ಪ್ರಸ್ತಾಪ ಮಾಡುತ್ತಿದ್ದಾಗ, ಇದಕ್ಕೆ ಸಂಬಂಧಪಟ್ಟಹಾಗೆ ಏನಾದರೂ ಹೇಳುತ್ತಾರೇನೋ ಎಂದು ಅವಕಾಶ ಕೊಟ್ಟೆ. ಮಾನ್ಯ ಶಿವಪ್ಪನವರು ನನ್ನ ಕಚೇರಿಗೆ ಬಂದು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದರು. ಇವತ್ತು ಅಧಿವೇಶನದ ಕಡೇ ದಿವಸ. ನಮಗೆ ಮುಖ್ಯವಾಗಿ ಯು.ಕೆ.ಪಿ. ವಿಚಾರ ಚರ್ಚೆ ಅಪೂರ್ಣವಾಗಿದೆ. ಮುಖ್ಯ ಮಂತ್ರಿಯವರು ರಾಯಚೂರಿನಿಂದ ಎರಡೂವರೆಗೆ ಬರುತ್ತೇನೆ, ಆಮೇಲೆ ತೆಗೆದುಕೊಳ್ಳಿ, ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ. ಎರಡು ಬಿಲ್ಸ್ ನಮ್ಮ ಹತ್ತಿರ ಪೆಂಡಿಂಗ್ ಇವೆ. ತಡೆಹಿಡಿದ ಪ್ರಶ್ನೆಗಳನ್ನು ಮಾತ್ರ ಇವತ್ತು ತೆಗೆದುಕೊಂಡಿದ್ದೇವೆ. ನಾನು ಬೇರೆ ಯಾವ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದೆ. ಇದು ಪ್ರಮುಖವಾದ ವಿಷಯ ಅಲ್ಲವೆಂದು ಅಲ್ಲ. 10 ಜನ ಬಂದು, ಬೇರೆ ಬೇರೆ ವಿಷಯ ಪ್ರಸ್ತಾಪ ಮಾಡುವುದಕ್ಕೆ ನನಗೆ ಅನುಮತಿ ಕೇಳಿದರು. ತಾವು ಹಿರಿಯ ಸದಸ್ಯರಿದ್ದೀರಿ, ಒಂದು ವಿಷಯಕ್ಕೆ ಅವಕಾಶ ಕೊಟ್ಟರೆ, ಅವರ ದೃಷ್ಟಿಯಲ್ಲಿ ಅದು ಪ್ರಾಮುಖ್ಯ ಇರಬಹುದು, ನನ್ನ ದೃಷ್ಟಿಯಲ್ಲಿ ಇನ್ನೊಂದು ಪ್ರಾಮುಖ್ಯ ಎಂದು ಇನ್ನೊಬ್ಬರು ಎದ್ದು ನಿಲ್ಲುತ್ತಾರೆ. ಆದ್ದರಿಂದ, ನನಗೆ ಸಭೆ ನಡೆಸುವುದು ಕಷ್ಟವಾಗುತ್ತದೆ. ನಿಮ್ಮೆಲ್ಲರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯವನ್ನು ಇಲ್ಲಿಗೆ ಕೈ ಬಿಟ್ಟು, ಈಗ ಶಾಸನ ರಚನೆಯ ಕೆಲಸಕ್ಕೆ ಕೈ ಹಾಕೋಣ. ಪೈಜ್ ಕೊಡುವ ವಿಷಯದ ಬಗ್ಗೆಯೂ ಮುಖ್ಯ ಮಂತ್ರಿಗಳು ಬರುತ್ತಾರೆ. ಮುಖ್ಯ ಮಂತ್ರಿಗಳು ಬಂದಾಗ ನೀವು ಹೇಳಿ, ಅವರು ಇರುತ್ತಾರೆ, ಉತ್ತರ ಕೊಡುತ್ತಾರೆ.

ಶ್ರೀ ವೈ.ರಾಮಕೃಷ್ಣ:- ಈ ಬಿಲ್ಸ್ ಏನಿವೆ, ಇವುಗಳನ್ನು 3 ಗಂಟೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು:- ಹಾಗಾದರೆ, ಈಗ ಊಟಕ್ಕೆ ಅಡ್ಜರ್ನ್ ಮಾಡೋಣವೇ. ಬಿಲ್ಸ್ ಚರ್ಚೆಯಾದ ಮೇಲೆ ಖರ್ಗೆಯವರ ಭಾಷಣ ಪೂರ್ತಿಯಾಗಬೇಕು, ಮುಖ್ಯ ಮಂತ್ರಿಗಳಿಂದ ಉತ್ತರವೂ ಆಗಬೇಕಲ್ಲ. ಹಾಗಾದರೆ, ಖರ್ಗೆಯವರ ಭಾಷಣ ಪೂರ್ತಿ ಮಾಡಿಸೋಣವೇ. ನನಗೆ ಗೊತ್ತಿದೆ, ನಿಮಗೆ ಸಭೆ ಇದೆ, ನಿಮಗೆ ಆ ತೊಂದರೆ ಎಲ್ಲಾ ಇದೆ ನಿಜ. ನನಗೆ ಟೈಮಿಂಗ್ಸ್ ಅಡ್ಜೆಸ್ಟ್ ಆಗಬೇಡವೇ. ಇವು ಸಿಂಪಲ್ ಬಿಲ್ಸ್ ಇವುಗಳನ್ನು ಮುಗಿಸಿಬಿಡೋಣವೇ.

ಶ್ರೀ ವೈ.ರಾಮಕೃಷ್ಣ:- ನಾವು ಭರವಸೆ ಕೊಟ್ಟಿದ್ದೇವೆ. ಅವುಗಳನ್ನು ಮುಗಿಸಿ ಕೊಡುತ್ತೇವೆ.

ಅಧ್ಯಕ್ಷರು :- ನನ್ನ ಸಮಸ್ಯೆ ಏನೆಂದರೆ, ಈ ಎರಡು ಬಿಲ್ಲುಗಳನ್ನು ಕ್ಲಿಯರ್ ಮಾಡಿಕೊಂಡು, ಖರ್ಗೆಯವರ ಭಾಷಣ ಪೂರ್ತಿ ಮಾಡಿಸಿ,

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ರೂಲ್ 69ರ ಪ್ರಕಾರ ರೈಸ್ ಮಾಡಿದ್ದು, ಇದರ ಚರ್ಚೆ ಪೂರ್ತಿಯಾಗಬೇಕು. ಏಕೆಂದರೆ, ನಾಳೆ ನಮ್ಮದು ಟೀಚರ್ ಕಾನ್‌ಫರೆನ್ಸ್ ಇದೆ, ಹೋಗಬೇಕು.

ಅಧ್ಯಕ್ಷರು:- ನಾಳೆ ನಾವು ಕೂಡುವುದಿಲ್ಲ. ಇವತ್ತು ನೀವು ಪೂರ್ಣ ಮಾಡುತ್ತೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮುಖ್ಯ ಮಂತ್ರಿಗಳಿಗೆ ಬಳ್ಳಾರಿಯಲ್ಲಿ ಒಂದೂವರೆ ಗಂಟೆಗೆ ಸಮಾರಂಭ ಇದೆಯಂತೆ. ಅವರ ಹೆಸರಿನ ಮೇಲೆ ಒಂದು ಊರೇನೋ ಮಾಡುತ್ತಾರಂತೆ, ಅದಕ್ಕಾಗಿ ಅವರು ಬರುವುದು ಸುಮಾರು 4 ಗಂಟೆಯಾಗಬಹುದು.

ಅಧ್ಯಕ್ಷರು:- ಅದೆಲ್ಲಾ ನನಗೆ ಗೊತ್ತಿಲ್ಲ. ಯಾರ ಯಾರ ಹೆಸರಿನಲ್ಲಿ ಏನೇನು ಮಾಡುತ್ತಾರೆಂದು. ನನಗೆ ಬೆಳಿಗ್ಗೆ ಫೋನ್ ಮಾಡಿ ಹೇಳಿದ್ದಾರೆ, ಎರಡೂವರೆ ಗಂಟೆಗೆ ಅವರು ಇಲ್ಲಿರುತ್ತಾರೆ. ತಾವು ಭಾಷಣ ಮುಂದುವರಿಸುತ್ತೇನೆಂದರೆ, ಒಂದೂವರೆ ಗಂಟೆಯವರೆಗೂ ಮಾತನಾಡಿ, ನಂತರ ಊಟಕ್ಕೆ ಅಡ್ಜರ್ನ್ ಮಾಡಬಹುದು. ಇಲ್ಲವೇ ಒಂದೇ ಸಾರಿ ಎರಡೂವರೆ ಗಂಟೆಗೆ ಸೇರೋಣ ಅಂದರೆ ಎರಡೂವರೆ ಗಂಟೆಯಿಂದ ಮೂರು ಗಂಟೆಯವರೆಗೆ ತಾವು ಭಾಷಣ ಮುಂದುವರಿಸಿ, ಮುಕ್ತಾಯವಾದ ಮೇಲೆ,

ಏಕೆಂದರೆ, ನಿಮ್ಮ ನಾಲ್ಕೂ ಜನರ ಅನುಕೂಲಕ್ಕೇ ಬಿಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ರೆಡಿ ಇದ್ದೇನೆ.

ಶ್ರೀ ಸಿ.ಬೈರೇಗೌಡ:- ನಾವು ಬಹುಶಃ ಎರಡು ಗಂಟೆಯವರೆಗೂ ಸಭೆ ನಡೆಸಿ, ನಂತರ ಊಟಕ್ಕೆ ಅಡ್ಜರ್ನ್ ಮಾಡಬಹುದು.

ಅಧ್ಯಕ್ಷರು:- ಈಗ ಖರ್ಗೆಯವರು ಭಾಷಣ ಮುಂದುವರೆಸಲಿ, ನಂತರ ಬಿಲ್ಸ್ ತೆಗೆದುಕೊಳ್ಳೋಣ. ಬಿ.ಜೆ.ಪಿ. ಸದಸ್ಯರುಗಳಿಗೆ ಸಭೆ ಇರುವುದರಿಂದ ಹೋಗುತ್ತಿದ್ದಾರೆ, ಇದು ಸಭಾತ್ಯಾಗ ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹವಾಲ ಬಗ್ಗೆ ವಿವರಣೆ ಮಾಡಬೇಕು, ಅದಕ್ಕಾಗಿ ಅವರು ಜನಗಳ ಹತ್ತಿರ ಹೋಗುತ್ತಿದ್ದಾರೆ.

ಅಧ್ಯಕ್ಷರು:- ನನ್ನ ಒಬ್ಬನನ್ನು ಬಿಟ್ಟು ನೀವೆಲ್ಲರೂ ಜನರ ಹತ್ತಿರ ಹೋಗುವವರೇ.

ನಾನೊಬ್ಬನೇ ನೋಟಿಫಿಕೇಷನ್ ಇಶ್ಯೂ ಆದರೆ, ಮನೆಯಲ್ಲಿ ಇರಬೇಕಾದವನು.

ಶ್ರೀ ಕೆ.ಎನ್.ನಾಗೇಗೌಡ:- ವಿರೋಧಪಕ್ಷದವರು ಯಾವಾಗಲೂ ಮಂತ್ರಿಗಳು ಇಲ್ಲ ಮುಖ್ಯ ಮಂತ್ರಿಗಳು ಇಲ್ಲ, ಸದನ ನಡೆಯುವುದಿಲ್ಲ, ಸದನಕ್ಕೆ ಕಾಲಾವಕಾಶ ಇಲ್ಲ ಎನ್ನುವುದನ್ನು ಕೇಳಿದ್ದೇವೆ. ಆದರೆ, ಒಂದು ರೆಕಗ್ನಿಷನ್ ವಿರೋಧ ಪಕ್ಷದ ಪೂರ್ಣ ಸದಸ್ಯರು ಹೊರಗಡೆ ಹೋಗುತ್ತಾರೆಂದು ಹೇಳಿದರೆ ಹೇಗೆ? ವಿರೋಧ ಪಕ್ಷವಾಗಿ ಅವರು ಯಾವ ರೀತಿ ಬಿಹೇವ್ ಮಾಡುತ್ತಾರೆ ಎನ್ನುವುದಕ್ಕೆ, ಇದಕ್ಕಿಂತ ಎಕ್ಸಾಂಪಲ್ ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಸಭೆ ನಡೆಯುತ್ತಾ ಇದೆ, ಮುಖ್ಯ ಮಂತ್ರಿಗಳು ಬಳ್ಳಾರಿಗೆ ಯಾವುದೋ ಉದ್ಘಾಟನೆಗೆ ಹೋಗಿದ್ದಾರೆ, ರಾಜ್ಯಾದ್ಯಂತ ತಿರುಗುತ್ತಿದ್ದಾರೆ. ಎಲ್ಲಾದರೂ ಉಂಟೇ, ಸಭೆ ನಡೆಯುವಾಗ,

ಅಧ್ಯಕ್ಷರು:- ಇದೂ ಅಲ್ಲದೆ, ಅನೇಕ ಜನ ನಮ್ಮ ಸದಸ್ಯರುಗಳು ಕೂಡ ನಮ್ಮ ಸ್ನೇಹಿತರುಗಳು, ಹೇಳಿದ ಮಾತಿನ ಪ್ರಕಾರ ನಡೆದುಕೊಳ್ಳುವುದಿಲ್ಲ. ಬರುತ್ತೇನೆಂದು ಹೇಳಿ, ಹಾಗೆಯೇ ಹೊರಟು ಹೋಗುವವರು ಇಲ್ಲವೇ. ನಿಮಗೆ ಅನುಭವ ಆಗಿಲ್ಲವೇ.

ಶ್ರೀ ಮಂಜುನಾಥ ಸಿ.ಕುನ್ನೂರ್:- ಸಭಾ ನಾಯಕರು ಇಲ್ಲದೇ ಸಭೆ ನಡೆಸುವುದು ಒಳ್ಳೆಯದಲ್ಲ.

ಶ್ರೀ ವಾಟಾಳ್ ನಾಗರಾಜ್:- ಅವರು ಇದ್ದಾರೆ, ಬರೆದುಕೊಳ್ಳುತ್ತಾರೆಂಬುದಲ್ಲ. ಇಂತಹ ಪ್ರಾಮುಖ್ಯವಾದ ವಿಷಯ ಚರ್ಚೆಯಾಗುತ್ತಿದೆ. ಕೃಷ್ಣ ಬಗ್ಗೆ ಬಹಳ ಗಾಂಭೀರ್ಯವಾದ ಚರ್ಚೆ ಆಗುತ್ತಿದೆ. ಇದನ್ನು ಕೇಳತಕ್ಕಂಥ ಮುಖ್ಯ ಮಂತ್ರಿಗಳು, ಪ್ರಾಮಾಣಿಕವಾಗಿ, ನಾನೇನು ಅವರನ್ನು ತೆಗಳಬೇಕಂದಲ್ಲ. ಹಾಗಾದರೆ, ಅವರಿಗೆ ಕೃಷ್ಣಾ ಬಗ್ಗೆ ಎಷ್ಟು ಕಾಳಜಿ ಇದೆ? ಇದು ನಿಜವಾಗಿಯೂ ಬಹಳ ಪ್ರಾಮುಖ್ಯತೆ ಇರತಕ್ಕಂತಾದ್ದು ಮುಖ್ಯ ಮಂತ್ರಿಗಳು ಇಲ್ಲದೇ ಚರ್ಚೆ ಮಾಡುವುದು ಪ್ರಯೋಜನವಿಲ್ಲ. ನನಗನ್ನಿಸುತ್ತದೆ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸುಮ್ಮನೆ ಒಂದು ರೀತಿ ಎಲ್ಲೋ ಕೂಗಿದ ಹಾಗೆ ಆಗುತ್ತದೆ. ನಿಜವಾಗಿಯೂ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸಚಿವ ಸಂಪುಟದ ಮಂತ್ರಿಗಳು ಇರುತ್ತಾರೆ, ಅವರು ಬರೆದುಕೊಳ್ಳುತ್ತಾರೆ. ಮೊನ್ನೆ ಸಿಂಧ್ಯಾಜಿಯವರು ಇದ್ದರು, ಎರಡು ಮೂರು ವಾಕ್ಯಗಳನ್ನು ಬರೆದುಕೊಂಡಿರಬೇಕು. ಅವರು, ನನಗೆ ವಹಿಸಿಕೊಟ್ಟಿದ್ದಾರೆಂದು ಹೇಳಿದರು. ಆದರೆ, ಇವತ್ತು ಸ್ಟೇಟ್ ಮಿನಿಸ್ಟರೂ ಇಲ್ಲ, ಅವರೂ ಇಲ್ಲ. ನಾವು ಯಾರಿಗೆ ಹೇಳುವುದು? ಇರಿಗೇಷನ್‌ಗೆ ಸಂಬಂಧಪಟ್ಟಂತೆ, ಯಾರಾದರೂ ಒಬ್ಬರು ಬೇಕು. ಅದಕ್ಕೆ ಸುಮ್ಮನೆ ಅಡ್ಜರ್ನ್ ಮಾಡಿ, ಮತ್ತೆ ಎರಡೂವರೆ ಗಂಟೆಗೆ ಸೇರೋಣ.

(ಶ್ರೀ ಕೆ.ಎನ್.ನಾಗೇಗೌಡರು, ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ವಾಟಾಳ್ ನಾಗರಾಜ್:- ಪ್ರಾಮಾಣಿಕವಾಗಿ ಒಂದು ಚಿಂತನೆ ಮಾಡೋಣ. ಕೃಷ್ಣಾ ಯೋಜನೆಯ ಬಗ್ಗೆ ಗಂಭೀರವಾದ ಚರ್ಚೆಯಾಗುವಾಗ ಮಾನ್ಯ ಮುಖ್ಯ ಮಂತ್ರಿಗಳು ಇರಬೇಕಾದ್ದು ಅವರ ಕರ್ತವ್ಯ. ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರು ಇಲ್ಲದೇ ಚರ್ಚೆ ಮಾಡತಕ್ಕಂಥಾದ್ದು ಏನು ಪ್ರಯೋಜನವಾಗುತ್ತದೆ? ತಾವು ಪ್ರಾಮಾಣಿಕವಾಗಿ ಸಭೆಗೆ ಹೇಳಬೇಕು.